ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 138-147
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವರ್ತಮಾನದಲ್ಲಿ ದಲಿತ ಸಂಘಟನೆಗಳ ಐಕ್ಯತೆ ಮತ್ತು ಸವಾಲುಗಳು

**ಡಾ. ಕೆ. ಖಾದರ್ ಭಾಷ**

ಕನ್ನಡ ಸಹ ಪ್ರಾಧ್ಯಾಪಕ, ಸರಕಾರಿ ಪ್ರಥಮದರ್ಜೆ ಕಾಲೇಜು, ತುರುವಿಹಾಳ

***Abstract:***

*ಇಂದಿನ ಸಾಮಾಜಿಕ ಹಾಗೂ ರಾಜಕೀಯ ಸಂದರ್ಭದಲ್ಲಿ ದಲಿತ ಸಂಘಟನೆಗಳ ಐಕ್ಯತೆ ಸಾಮಾಜಿಕ ನ್ಯಾಯದ ಸಾಧನೆಗೆ ಅತ್ಯಂತ ಮಹತ್ವದ ಅಂಶವಾಗಿದೆ. ವಿವಿಧ ದಲಿತ ಸಂಘಟನೆಗಳು ಶಿಕ್ಷಣ, ಭೂಹಕ್ಕು, ಸಾಮಾಜಿಕ ಸಮಾನತೆ ಹಾಗೂ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗೆ ಹೋರಾಟ ನಡೆಸುತ್ತಿವೆ. ಆದರೆ ಸಂಘಟನೆಗಳ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು, ರಾಜಕೀಯ ಹಸ್ತಕ್ಷೇಪ, ನಾಯಕತ್ವದ ಪೈಪೋಟಿ ಹಾಗೂ ಉಪಜಾತಿ ಆಧಾರಿತ ವಿಭಜನೆಗಳು ಐಕ್ಯತೆಗೆ ಪ್ರಮುಖ ಸವಾಲುಗಳಾಗಿವೆ. ಜಾಗತೀಕರಣ, ಸಾಮಾಜಿಕ ಮಾಧ್ಯಮಗಳ ಪ್ರಭಾವ ಮತ್ತು ಹೊಸ ಸಾಮಾಜಿಕ ಚಳವಳಿಗಳು ಸಂಘಟನೆಗಳ ಕಾರ್ಯವೈಖರಿಯ ಮೇಲೆ ಪರಿಣಾಮ ಬೀರಿವೆ. ಈ ಲೇಖನವು ವರ್ತಮಾನದಲ್ಲಿ ದಲಿತ ಸಂಘಟನೆಗಳ ಐಕ್ಯತೆಯ ಅಗತ್ಯತೆ, ಎದುರಾಗಿರುವ ಸವಾಲುಗಳು ಹಾಗೂ ಅವುಗಳನ್ನು ನಿವಾರಿಸುವ ಮಾರ್ಗಗಳನ್ನು ವಿಶ್ಲೇಷಿಸುತ್ತದೆ. ದಲಿತ ಚಳವಳಿಯ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಸಮನ್ವಯ, ಸಮಾನ ನಾಯಕತ್ವ ಮತ್ತು ಸಾಮೂಹಿಕ ಹೋರಾಟದ ಅವಶ್ಯಕತೆಯನ್ನು ಒತ್ತಿಹೇಳುತ್ತದೆ. ಸಾಮಾಜಿಕ ಪರಿವರ್ತನೆ ಮತ್ತು ಸಮಾನತೆಯ ಸಾಧನೆಯಲ್ಲಿ ದಲಿತ ಸಂಘಟನೆಗಳ ಐಕ್ಯತೆಯ ಮಹತ್ವವನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ.*

**Keywords:** *ದಲಿತ ಸಂಘಟನೆಗಳು, ಐಕ್ಯತೆ, ಸಾಮಾಜಿಕ ನ್ಯಾಯ, ದಲಿತ ಚಳವಳಿ, ಸಮಕಾಲೀನ ಸವಾಲುಗಳು*

## ಪೀಠಿಕೆ

ಎಪ್ಪತ್ತರ ದಶಕದಿಂದ ಇಂದಿನವರೆಗೂ ದಲಿತ ಸಂಘಟನೆಗಳು ಅನೇಕ ಬಣಗಳಾಗಿ ಕವಲೊಡೆದು ವಿಭಜನೆಗೊಂಡಿರುವ ಹಿನ್ನೆಲೆಯಲ್ಲಿ, ಅವುಗಳನ್ನು ಮತ್ತೆ ಒಗ್ಗೂಡಿಸುವ ಅಗತ್ಯತೆ ಇಂದು ಹೆಚ್ಚು ಪ್ರಸ್ತುತವಾಗಿದೆ. ಈ ಐಕ್ಯತೆಯ ಹಾದಿಯಲ್ಲಿ ಒಳಮೀಸಲಾತಿಯ ಪ್ರಶ್ನೆಯು ಅಡ್ಡಿಯಾಗಿದೆಯೇ ಎಂಬ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿಯೇ, 2022ರ ಡಿಸೆಂಬರ್ 6ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ 'ದಲಿತರ ಸಾಂಸ್ಕೃತಿಕ ಪ್ರತಿರೋಧ – ದಲಿತ ಸಂಘಟನೆಗಳ ಏಕತಾ ಸಮಾವೇಶ' ವಿಶೇಷ ಮಹತ್ವ ಪಡೆದಿದೆ. ವಿಭಜನೆಗೊಂಡಿದ್ದ ದಲಿತ ಸಂಘಟನೆಗಳನ್ನು ಮತ್ತೆ ಒಂದೇ ವೇದಿಕೆಯಡಿ ತರುವ ಪ್ರಯತ್ನವಾಗಿ ಈ ಸಮಾವೇಶ ಗಮನ ಸೆಳೆಯಿತು. ಅಂದೇ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 66ನೇ ಪರಿನಿರ್ವಾಣ ದಿನವೂ ಆಗಿದ್ದರಿಂದ, ಈ ಸಮಾವೇಶವು ವಿಶೇಷ ಸಾಂಕೇತಿಕ ಮಹತ್ವವನ್ನು ಪಡೆದು ಯುವಜನರಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸಿತು. ಅಂಬೇಡ್ಕರ್ ಪ್ರತಿಪಾದಿಸಿದ "ಶಿಕ್ಷಣ, ಸಂಘಟನೆ ಮತ್ತು

***Please cite this article as:*** ಖಾದರ್ ಭಾಷ, ಕೆ. (2026). ವರ್ತಮಾನದಲ್ಲಿ ದಲಿತ ಸಂಘಟನೆಗಳ ಐಕ್ಯತೆ ಮತ್ತು ಸವಾಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 138–147

ಹೋರಾಟ" ಎಂಬ ಧ್ಯೇಯವಾಕ್ಯವನ್ನು ಸಾಕಾರಗೊಳಿಸುವ ಉದ್ದೇಶದಿಂದ ಈ ಸಮಾವೇಶ ಆಯೋಜಿಸಲಾಯಿತು. ಅದರ ಶೀರ್ಷಿಕೆಯೇ ದಲಿತ ಚಳವಳಿಯ ಸಾಂಸ್ಕೃತಿಕ ಪ್ರತಿರೋಧ ಮತ್ತು ಸಂಘಟನಾ ಐಕ್ಯತೆಯ ಅಗತ್ಯವನ್ನು ಪ್ರತಿಬಿಂಬಿಸುವಂತಿತ್ತು. ತೊಂಬತ್ತರ ದಶಕದಿಂದ ಕರ್ನಾಟಕದ ದಲಿತ ಸಂಘರ್ಷ ಸಮಿತಿಯು ಹಲವು ಬಣಗಳಾಗಿ ವಿಭಜನೆಗೊಂಡಿದ್ದ ಹಿನ್ನೆಲೆಯಲ್ಲಿ, ಸುಮಾರು ಮೂರು ದಶಕಗಳ ನಂತರ ವಿವಿಧ ಬಣಗಳು ಒಂದಾಗಲು ಕೈಗೊಂಡ ಈ ಪ್ರಯತ್ನವು ಕರ್ನಾಟಕದ ಶೋಷಿತ ಸಮುದಾಯಗಳಲ್ಲಿ ಹೊಸ ಚೈತನ್ಯವನ್ನು ಮೂಡಿಸಿತು. ಆದಾಗ್ಯೂ, ಸಂಪೂರ್ಣ ಸಂಘಟನಾ ಐಕ್ಯತೆಯ ಕನಸು ಇನ್ನೂ ನನಸಾಗಬೇಕಿದೆ.

ಕರ್ನಾಟಕದಲ್ಲಿ 1970ರ ದಶಕದ ನಂತರ ಸ್ಥಾಪನೆಯಾದ ದಲಿತ ಸಂಘರ್ಷ ಸಮಿತಿಯು ದಲಿತ ಸಮುದಾಯದಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಗೌರವವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಭೂಮಾಲೀಕರಿಂದ ಹಿಡಿದು ಜಾತಿ ಆಧಾರಿತ ಶ್ರೇಣಿ ವ್ಯವಸ್ಥೆಯ ಮೂಲಕ ನಡೆಯುತ್ತಿದ್ದ ವಿವಿಧ ರೀತಿಯ ಶೋಷಣೆಗಳ ವಿರುದ್ಧ ಸಂಘಟಿತ ಹೋರಾಟ ನಡೆಸಿದ ಪ್ರಮುಖ ಸಂಘಟನೆಯಾಗಿ ಅದು ಗುರುತಿಸಲ್ಪಟ್ಟಿತು. ಶೋಷಣೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯವಾಗದಿದ್ದರೂ, ದಲಿತ ಸಮುದಾಯದಲ್ಲಿ ಆತ್ಮಗೌರವದ ಭಾವನೆಯನ್ನು ಬಲಪಡಿಸಿ, ಸಾಮಾಜಿಕ ಅಸಮಾನತೆ ಮತ್ತು ಮೇಲ್ವರ್ಗದ ಪ್ರಾಬಲ್ಯಕ್ಕೆ ಸವಾಲು ಹಾಕುವಲ್ಲಿ ಯಶಸ್ವಿಯಾಯಿತು. ಸಂಘಟನೆಯ ಆರಂಭಿಕ ಹಂತದಲ್ಲಿ ವಿವಿಧ ವರ್ಗಗಳ ಪ್ರಗತಿಪರರು ಅದರ ಸದಸ್ಯರಾಗಿದ್ದರೆ, ಕಾಲಕ್ರಮೇಣ ಅದರ ನಾಯಕತ್ವ ಮತ್ತು ಸದಸ್ಯತ್ವವು ಮುಖ್ಯವಾಗಿ ಎಡಗೈ ಹಾಗೂ ಬಲಗೈ ಸಮುದಾಯಗಳಿಗೆ ಸೀಮಿತವಾಯಿತು. ಆದಾಗ್ಯೂ, ಸಮಪಾಲು ಮತ್ತು ಸಮಬಾಳು ಎಂಬ ಸಾಮಾಜಿಕ ನ್ಯಾಯದ ತತ್ವವೇ ಸಂಘಟನೆಯ ಮೂಲ ಆಶಯವಾಗಿತ್ತು.

"ದಲಿತರು ಬರುವರು, ದಾರಿ ಬಿಡಿ; ದಲಿತರ ಕೈಗೆ ರಾಜ್ಯ ಕೊಡಿ" ಎಂಬ ಘೋಷಣೆಯೊಂದಿಗೆ ರೂಪುಗೊಂಡ ಈ ಸಂಘಟನೆಯ ಕನಸು ಇಂದಿಗೂ ಸಂಪೂರ್ಣವಾಗಿ ಸಾಕಾರವಾಗಿಲ್ಲ ಎಂಬುದು ವಿಷಾದನೀಯ ಸಂಗತಿಯಾಗಿದೆ. ಭೂತಕಾಲದಲ್ಲಿ ನಡೆದ ಕಗ್ಗೊಲೆಗಳು, ಅತ್ಯಾಚಾರಗಳು ಮತ್ತು ಜಾತಿ ಆಧಾರಿತ ದೌರ್ಜನ್ಯಗಳು ಇಂದಿಗೂ ಮುಂದುವರಿದಿರುವುದು ಆತಂಕಕಾರಿ ಬೆಳವಣಿಗೆ ಯಾಗಿದೆ. ಭವಿಷ್ಯದಲ್ಲಿಯೂ ಇಂತಹ ಪ್ರವೃತ್ತಿಗಳು ಮುಂದುವರಿಯುವ ಸಾಧ್ಯತೆಗಳು ಕಂಡುಬರುತ್ತಿವೆ. ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಸಮೀಕ್ಷೆಯ ಪ್ರಕಾರ, ಭಾರತದಲ್ಲಿ 2015ರಿಂದ 2021ರ ಅವಧಿಯಲ್ಲಿ ಪರಿಶಿಷ್ಟ ಜಾತಿಯವರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಗಮನಾರ್ಹ ಏರಿಕೆ ಕಂಡುಬಂದಿದೆ. ಅಲ್ಲದೆ, 2021ರ ಅಂತ್ಯದ ವೇಳೆಗೆ ದೇಶದಾದ್ಯಂತ ಸುಮಾರು 2.95 ಲಕ್ಷ ದೌರ್ಜನ್ಯ ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿದ್ದವು. ಈ ಅಂಕಿಅಂಶಗಳು ದಲಿತರ ಮೇಲಿನ ಹಿಂಸಾಚಾರ ಮತ್ತು ತಾರತಮ್ಯ ಇನ್ನೂ ಗಂಭೀರ ಸಾಮಾಜಿಕ ಸಮಸ್ಯೆಯಾಗಿಯೇ ಮುಂದುವರಿದಿರುವುದನ್ನು ಸೂಚಿಸುತ್ತವೆ. ಇಂತಹ ಪರಿಸ್ಥಿತಿಗೆ ಹಲವು ಕಾರಣಗಳಿದ್ದು, ಅವುಗಳಲ್ಲಿ ದಲಿತ ಸಂಘಟನೆಗಳ ವಿಭಜನೆ ಮತ್ತು ಸಂಘಟನಾ ದುರ್ಬಲತೆ ಪ್ರಮುಖ ಕಾರಣಗಳೆಂದು ಪರಿಗಣಿಸಬಹುದು.

ತನ್ನ ಮತ್ತು ತನ್ನ ಕುಟುಂಬದ ಬದುಕನ್ನು ಉತ್ತಮಗೊಳಿಸಿಕೊಳ್ಳಬೇಕೆಂಬುದು ಪ್ರತಿಯೊಬ್ಬ ವ್ಯಕ್ತಿಯ ಸಹಜ ಆಶಯವಾಗಿದೆ. ಆದರೆ ಸಮಾಜದ ಆಳುವ ವರ್ಗವು ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ದುರ್ಬಲ ವರ್ಗಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತ ಬಂದಿದೆ. ಇಂತಹ

ದಮನಕಾರಿ ವ್ಯವಸ್ಥೆಯನ್ನು ವಿರೋಧಿಸಿ ಸಮುದಾಯದ ಬದುಕನ್ನು ಸುಧಾರಿಸಿಕೊಳ್ಳಲು ವಿವಿಧ ರೀತಿಯ ಪ್ರತಿರೋಧಗಳು ರೂಪುಗೊಳ್ಳುತ್ತವೆ. ಕೆಲವರು ತಮ್ಮ ನೋವು ಮತ್ತು ಆವೇದನೆಗಳನ್ನು ಮಿತವಾಗಿ ವ್ಯಕ್ತಪಡಿಸಿದರೆ, ಇನ್ನು ಕೆಲವರು ಆಕ್ರೋಶಭರಿತವಾಗಿ ಹಕ್ಕುಗಳನ್ನು ಪ್ರತಿಪಾದಿಸುತ್ತಾರೆ. ಸಮುದಾಯದೊಂದಿಗೆ ಸಂಘಟಿತರಾಗಿ ಅನ್ಯಾಯದ ವಿರುದ್ಧ ಹೋರಾಟ ನಡೆಸುವುದು ಸಂಘಟನೆಯ ಮೂಲ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ, "ಪ್ರತಿಭಟನೆಗಿಂತ ಹೋರಾಟವು ವಿಸ್ತೃತವಾದುದು, ವಿಶಾಲವಾದುದು ಮತ್ತು ಪಕ್ವವಾದುದು; ಹೋರಾಟಕ್ಕಿಂತ ಚಳವಳಿಯು ಇನ್ನಷ್ಟು ವಿಸ್ತೃತವಾದುದು, ವಿಶಾಲವಾದುದು ಮತ್ತು ಪರಿಪಕ್ವವಾದುದು."[1] ಎಂಬ ಅಭಿಪ್ರಾಯವು ಸಂಘಟನೆ ಮತ್ತು ಚಳವಳಿಯ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.

ಯಾವುದೇ ಚಳವಳಿಯ ಜೀವಾಳವೇ ಸಂಘಟನೆ. ಸಂಘಟನೆ ಎಷ್ಟು ಬಲಿಷ್ಠವಾಗುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಅದು ಪ್ರಬಲ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳ ವಿರುದ್ಧ ಪರಿಣಾಮಕಾರಿ ಯಾಗಿ ಹೋರಾಡಲು ಸಾಧ್ಯವಾಗುತ್ತದೆ. ದಲಿತರ ಮೇಲೆ ಜಾತಿ, ಧರ್ಮ ಮತ್ತು ಸಾಮಾಜಿಕ ಶ್ರೇಣೀಕರಣದ ಹೆಸರಿನಲ್ಲಿ ವಿವಿಧ ರೀತಿಯ ದೌರ್ಜನ್ಯಗಳು ಹಾಗೂ ಹೇರಿಕೆಗಳು ಆರಂಭವಾದಾಗ ಅವುಗಳ ವಿರುದ್ಧ ಪ್ರತಿರೋಧವೂ ಸಂಘಟಿತ ಸ್ವರೂಪ ಪಡೆದುಕೊಂಡಿತು. ಈ ಪ್ರತಿರೋಧವು ವೈಯಕ್ತಿಕ ಅಸಮಾಧಾನಕ್ಕೆ ಸೀಮಿತವಾಗಿರದೆ, ಸಮುದಾಯದಲ್ಲಿರುವ ಅಸಮಾನತೆ ಮತ್ತು ಶೋಷಣೆಯನ್ನು ನಿರ್ಮೂಲನೆ ಮಾಡುವುದನ್ನೇ ತನ್ನ ಪ್ರಮುಖ ಗುರಿಯನ್ನಾಗಿ ಮಾಡಿಕೊಂಡಿತು. ಕರ್ನಾಟಕದಲ್ಲಿ ಇಂತಹ ಸಂಘಟನಾ ಪರಂಪರೆಯ ಆರಂಭವನ್ನು ಹನ್ನೆರಡನೇ ಶತಮಾನದ ವಚನ ಚಳವಳಿಯಿಂದ ಗುರುತಿಸಬಹುದಾದರೆ, ಆಧುನಿಕ ಕಾಲದಲ್ಲಿ ಅದು ದಲಿತ ಚಳವಳಿಯ ಮೂಲಕ ಹೊಸ ರೂಪ ಮತ್ತು ಹೊಸ ಆಯಾಮಗಳನ್ನು ಪಡೆದುಕೊಂಡಿದೆ.

ಹನ್ನೆರಡನೇ ಶತಮಾನದ ವಚನ ಚಳವಳಿಯು ಮೂಲತಃ ಸಂಘಟನಾ ಸ್ವರೂಪದ ಸಾಮಾಜಿಕ ಸುಧಾರಣಾ ಚಳವಳಿಯಾಗಿತ್ತು. ಬಸವಣ್ಣ ಮತ್ತು ಶರಣರು ಸಮಾನತೆ, ಶ್ರಮದ ಗೌರವ ಹಾಗೂ ಜಾತಿರಹಿತ ಸಮಾಜದ ಪರಿಕಲ್ಪನೆಯನ್ನು ಪ್ರತಿಪಾದಿಸುವ ಮೂಲಕ ಸಮಾಜದಲ್ಲಿ ಮಹತ್ವದ ಬದಲಾವಣೆಗೆ ನಾಂದಿ ಹಾಡಿದರು. ಈ ಚಳವಳಿಯ ಪ್ರಭಾವ ಕರ್ನಾಟಕದ ಗಡಿಗಳನ್ನು ಮೀರಿ ದೇಶದ ವಿವಿಧ ಭಾಗಗಳಿಗೂ ಹರಡಿತು. ನಂತರದ ಅವಧಿಯಲ್ಲಿ ದಲಿತ, ರೈತ ಹಾಗೂ ಮಹಿಳಾ ಸಂಘಟನೆಗಳು ಇದೇ ಸಾಮಾಜಿಕ ಪರಿವರ್ತನೆಯ ಪರಂಪರೆಯನ್ನು ಮುಂದುವರಿಸಿದವು. ವಚನ ಚಳವಳಿ ಮತ್ತು ದಲಿತ ಚಳವಳಿ ಎರಡೂ ಸಾಮಾಜಿಕ ಸಮಾನತೆ, ಮಾನವ ಘನತೆ ಹಾಗೂ ಶೋಷಣೆಯ ವಿರುದ್ಧದ ಹೋರಾಟವನ್ನು ತಮ್ಮ ಪ್ರಮುಖ ಧ್ಯೇಯವನ್ನಾಗಿಸಿಕೊಂಡಿದ್ದವು. ಇವು ಸಮಾಜದಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದಿದ್ದರೂ, ಸಂಪೂರ್ಣ ಸಾಮಾಜಿಕ ಸಮಾನತೆಯನ್ನು ಸಾಧಿಸುವ ಗುರಿ ಇನ್ನೂ ಪೂರ್ಣಗೊಂಡಿಲ್ಲ.

ವರ್ತಮಾನದ ದಲಿತ ಸಂಘಟನೆಗಳು ಮತ್ತು ಚಳವಳಿಗಳ ಕುರಿತು ಡಾ. ಮುಜಾಫರ್ ಅಸ್ಸಾದಿಯವರು, "ದಲಿತ ಚಳವಳಿಗೆ ಸಂಬಂಧಿಸಿದಂತೆ ಪ್ರಸಕ್ತ ಸಂದರ್ಭದಲ್ಲಿ ಮೂರು ವಾದಗಳಿವೆ: ಒಂದನೆಯದು, ಬಲಿಷ್ಠ ದಲಿತ ಚಳವಳಿಯನ್ನು ಕಟ್ಟುವುದು ಕಷ್ಟ; ಎರಡನೆಯದು, ದಲಿತ ಚಳವಳಿಯ ಪ್ರಮುಖ ಸಮಸ್ಯೆಯೆಂದರೆ ಅದರೊಳಗಿನ ದ್ವಂದ್ವಗಳು; ಮೂರನೆಯದು, ದಲಿತ ಚಳವಳಿ ದಮನಿತ ಸಮುದಾಯಗಳ ಸಮಗ್ರ ಚಳವಳಿಯಾಗಿ ರೂಪುಗೊಳ್ಳಲು ಸಾಧ್ಯವಾಗಿಲ್ಲ. ಇವು ಕೇವಲ ವಾದಗಳಷ್ಟೇ ಅಲ್ಲ, ಆಪಾದನೆಗಳೂ ಆಗಿವೆ."[2] ಎಂದು ಅಭಿಪ್ರಾಯಪಟ್ಟಿದ್ದಾರೆ. ಈ

ರೀತಿಯ ವಿಶ್ಲೇಷಣೆಗಳಿಗೆ ಹಲವಾರು ಸಾಮಾಜಿಕ, ರಾಜಕೀಯ ಮತ್ತು ಸಂಘಟನಾತ್ಮಕ ಕಾರಣಗಳಿವೆ. ಆದ್ದರಿಂದ ದಲಿತ ಸಂಘಟನೆಗಳ ಉಗಮ, ವಿಕಾಸ, ಸಂಘಟನಾ ಪ್ರಕ್ರಿಯೆ ಹಾಗೂ ಅವು ರೂಪಿಸಿದ ಸಾಮಾಜಿಕ–ರಾಜಕೀಯ ಪ್ರಜ್ಞೆಯನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ.

ಅಸ್ಪೃಶ್ಯರೆಂದು ಗುರುತಿಸಲ್ಪಟ್ಟ ದಲಿತ ಸಮುದಾಯವು ಪ್ರಾಚೀನ ಕಾಲದಿಂದಲೇ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅವಕಾಶಗಳಿಂದ ವಂಚಿತವಾಗಿತ್ತು. ಸಾಮಾಜಿಕ ಸಮಾನತೆ ಹಾಗೂ ಮಾನವೀಯ ಗೌರವವನ್ನು ನಿರಾಕರಿಸಿದ ಪರಿಸ್ಥಿತಿಯಲ್ಲಿ ಹೋರಾಟದ ಮಾರ್ಗವನ್ನು ಆಯ್ಕೆ ಮಾಡುವುದು ಅನಿವಾರ್ಯವಾಯಿತು. ಈ ಹೋರಾಟಕ್ಕೆ ಮಹಾತ್ಮ ಜ್ಯೋತಿರಾವ್ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ, ಡಾ. ಬಿ.ಆರ್. ಅಂಬೇಡ್ಕರ್, ಛತ್ರಪತಿ ಸಾಹು ಮಹಾರಾಜ್ ಹಾಗೂ ಪೆರಿಯಾರ್ ಇ.ವಿ. ರಾಮಸ್ವಾಮಿ ಮೊದಲಾದ ಸಮಾಜ ಸುಧಾರಕರ ಚಿಂತನೆಗಳು ಬಲವಾದ ಸೈದ್ಧಾಂತಿಕ ನೆಲೆಯನ್ನು ಒದಗಿಸಿವೆ. ದಲಿತರನ್ನು ಸಂಘಟಿಸಿ, ಅವರಲ್ಲಿರುವ ತಾರತಮ್ಯ, ಶೋಷಣೆ ಹಾಗೂ ಸೌಲಭ್ಯ ವಂಚಿತ ಸ್ಥಿತಿಯನ್ನು ಅರಿತು ಅದನ್ನು ಸಂಘಟಿತ ಚಳವಳಿಯ ರೂಪಕ್ಕೆ ತರುವುದು ಸಂಘಟನೆಗಳ ಮೂಲಕವೇ ಸಾಧ್ಯ ಎಂಬ ಅರಿವು ದಲಿತ ಸಮುದಾಯದಲ್ಲಿ ಬೆಳೆಯಿತು. ಈ ಹಿನ್ನೆಲೆಯಲ್ಲಿ ದಲಿತ ನಾಯಕರು ಚಳವಳಿಯನ್ನು ಪರಿಣಾಮಕಾರಿಯಾಗಿ ರೂಪಿಸುವ ಮಾರ್ಗಗಳ ಕುರಿತು ಗಂಭೀರವಾಗಿ ಚಿಂತನೆ ನಡೆಸಿದರು. ಅನಾದಿಕಾಲದಿಂದ ಶೂದ್ರ ಮತ್ತು ದಲಿತ ಸಮುದಾಯಗಳ ಮೇಲೆ ನಡೆಯುತ್ತಿದ್ದ ದೌರ್ಜನ್ಯ ಹಾಗೂ ದಬ್ಬಾಳಿಕೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಪ್ರಕ್ರಿಯೆಯು ಸ್ವಾತಂತ್ರ್ಯಪೂರ್ವ ಕಾಲದಲ್ಲಿಯೇ ಆರಂಭಗೊಂಡು, ಸ್ವಾತಂತ್ರ್ಯಾನಂತರ ದಲಿತ ಸಂಘಟನೆಗಳ ಮೂಲಕ ಹೆಚ್ಚು ಸಂಘಟಿತ ಸ್ವರೂಪವನ್ನು ಪಡೆದುಕೊಂಡಿತು.

ಪ್ರಾಚೀನ ಭಾರತೀಯ ಚಿಂತನೆಗಳಾದ ಚಾರ್ವಾಕ, ಲೋಕಾಯತ ಮತ್ತು ಭೌತವಾದಿ ತತ್ತ್ವಗಳು ಸಮಾನತೆ ಹಾಗೂ ವೈಚಾರಿಕ ಸ್ವಾತಂತ್ರ್ಯದ ಹೊಸ ಚಿಂತನೆಗಳಿಗೆ ಬುನಾದಿಯಾಗಿವೆ. ಬುದ್ಧ ಮತ್ತು ಬಸವಾದಿ ಶರಣರ ಕ್ರಾಂತಿಕಾರಿ ವಿಚಾರಧಾರೆಗಳು ಈ ಪರಂಪರೆಗೆ ಮತ್ತಷ್ಟು ಬಲ ತುಂಬಿದವು. ಜ್ಯೋತಿರಾವ್ ಫೂಲೆ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿಯವರ ಹರಿಜನೋದ್ಧಾರ ಕಾರ್ಯಕ್ರಮಗಳು ದಲಿತ ಸಮುದಾಯದ ಸಾಮಾಜಿಕ ಜಾಗೃತಿಗೆ ಮಹತ್ತರ ಕೊಡುಗೆ ನೀಡಿದವು. ನಾರಾಯಣ ಗುರು, ಪೆರಿಯಾರ್ ಇ.ವಿ. ರಾಮಸ್ವಾಮಿ, ಕಾರ್ಲ್ ಮಾರ್ಕ್ಸ್ ಹಾಗೂ ಡಾ. ರಾಮಮನೋಹರ ಲೋಹಿಯಾ ಅವರ ಚಿಂತನೆಗಳು ದಲಿತರಲ್ಲಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ವೃದ್ಧಿಸಿದವು. ಬ್ರಿಟಿಷರ ಆಡಳಿತಾವಧಿಯಲ್ಲಿ ಶಿಕ್ಷಣಕ್ಕೆ ದೊರೆತ ಉತ್ತೇಜನವು ಹೊಸ ವಿಚಾರಧಾರೆಗಳ ಪರಿಚಯಕ್ಕೆ ದಾರಿ ಮಾಡಿಕೊಟ್ಟಿತು. ಜಗತ್ತಿನ ವಿವಿಧ ಭಾಗಗಳಲ್ಲಿ ನಡೆದ ವರ್ಗ ಹೋರಾಟಗಳು ಹಾಗೂ ಸಮಾನತೆಯ ಪರಿಕಲ್ಪನೆಗಳು ಶಿಕ್ಷಣದ ಮೂಲಕ ದಲಿತ ಸಮುದಾಯವನ್ನು ತಲುಪಿದವು. ಕ್ರೈಸ್ತ ಮಿಷನರಿಗಳು ಹಾಗೂ ಸ್ಥಳೀಯ ಸಂಸ್ಥಾನಗಳು ಸ್ಥಾಪಿಸಿದ ಶಾಲೆಗಳು ದಲಿತರಿಗೆ ಶಿಕ್ಷಣದ ಅವಕಾಶ ಕಲ್ಪಿಸಿ, ತಮ್ಮ ಸಾಮಾಜಿಕ ವಾಸ್ತವವನ್ನು ಅರಿತುಕೊಳ್ಳುವ ಪ್ರಜ್ಞೆಯನ್ನು ಬೆಳೆಸಿದವು. ಕರ್ನಾಟಕದಲ್ಲಿಯೂ ನೆರೆಯ ರಾಜ್ಯಗಳ ದಲಿತ ಚಳವಳಿಗಳ ಪ್ರಭಾವ ಹೊಸ ಸಾಮಾಜಿಕ ಜಾಗೃತಿಗೆ ಕಾರಣವಾಯಿತು. ಛತ್ರಪತಿ ಸಾಹು ಮಹಾರಾಜ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರು ಜಾರಿಗೊಳಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸೌಲಭ್ಯಗಳು ದಲಿತ ಸಮುದಾಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದವು.

ಸುಮಾರು 1890ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರಿಗಾಗಿ ವಿಶೇಷ ಶಾಲೆಗಳನ್ನು

ಸ್ಥಾಪಿಸಲಾಯಿತು. 1904–05ರ ಅವಧಿಯಲ್ಲಿ ದಲಿತ ಸಮುದಾಯಕ್ಕಾಗಿ ನೂರಾರು ಶಾಲೆಗಳು ಆರಂಭಗೊಂಡವು. 1915ರಲ್ಲಿ ಕೆಲವು ವೈದಿಕರು ಅಸ್ಪೃಶ್ಯರಿಗೆ ಶಿಕ್ಷಣ ನೀಡುವುದನ್ನು ವಿರೋಧಿಸಿ ಅರಸರ ಬಳಿ ದೂರು ಸಲ್ಲಿಸಿದರೂ, 1918ರಲ್ಲಿ ಶಿಕ್ಷಣವನ್ನು ಸಾರ್ವಜನಿಕ ಹಕ್ಕಾಗಿ ಪರಿಗಣಿಸಿದ ನಿರ್ಧಾರವು ದಲಿತರ ಸಾಮಾಜಿಕ ಪ್ರಗತಿಯಲ್ಲಿ ಮಹತ್ವದ ಮೈಲಿಗಲ್ಲಾಯಿತು. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ದಲಿತರಲ್ಲಿ ಸಾಮಾಜಿಕ ಜಾಗೃತಿ ಹೆಚ್ಚಾಗಿ, ಆದಿ ದ್ರಾವಿಡ ಅಭಿವೃದ್ಧಿ ಸಂಘ, ಆದಿ ಜಾಂಬವ ಸಂಘ ಮುಂತಾದ ಸಂಘಟನೆಗಳು ಉದಯಿಸಿದವು. ಈ ಸಂಘಟನೆಗಳು ಮೈಸೂರು ಮಹಾರಾಜರಿಗೆ ದಲಿತ ಸಮುದಾಯದ ಸಮಸ್ಯೆಗಳನ್ನು ಮನವರಿಕೆ ಮಾಡಿ ಪರಿಹಾರಗಳನ್ನು ಪಡೆಯುವಲ್ಲಿ ಗಮನಾರ್ಹ ಯಶಸ್ಸು ಸಾಧಿಸಿದವು. ಇದರಿಂದ ದಲಿತರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿ, ಸರ್ಕಾರಿ ಉದ್ಯೋಗಗಳಲ್ಲಿ ಅವಕಾಶಗಳನ್ನು ಪಡೆಯುವ ಪರಿಸ್ಥಿತಿ ನಿರ್ಮಾಣವಾಯಿತು. ಅವರ ಹೋರಾಟವು ಕೇವಲ ಮೀಸಲಾತಿಗೆ ಸೀಮಿತವಾಗಿರದೆ, ಸಾಮಾಜಿಕ ನ್ಯಾಯ ಮತ್ತು ಸಮಾನ ಹಕ್ಕುಗಳ ಸಾಧನೆಯನ್ನೇ ತನ್ನ ಪ್ರಮುಖ ಗುರಿಯನ್ನಾಗಿಸಿಕೊಂಡಿತ್ತು.

ಈ ಸಂದರ್ಭದಲ್ಲಿ, "ಬ್ರಾಹ್ಮಣೇತರರು ತಮ್ಮನ್ನು ಕೋಮುವಾದಿಗಳೆಂದು ಕರೆದುಕೊಂಡು ಕೋಮುವಾರು ಪ್ರಾತಿನಿಧ್ಯಕ್ಕಾಗಿ ಹೋರಾಡಲು ಅಸ್ಪೃಶ್ಯರ ಬಲವನ್ನು ಬಳಸಿಕೊಂಡರು. ಆದರೆ ಮೀಸಲಾತಿಯನ್ನು ಸಮರ್ಪಕವಾಗಿ ಬಳಸಿಕೊಳ್ಳ ಲಾಗದ ದಲಿತರು 'ಮೀಸಲಾತಿಯ ಜನ' ಎಂಬ ಚುಚ್ಚುಮಾತಿಗೆ ಗುರಿಯಾಗುತ್ತಿದ್ದಾರೆ."[3] ಎಂಬ ಅಭಿಪ್ರಾಯವು ದಲಿತ ಸಮುದಾಯದಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿತು. ಈ ರೀತಿಯ ಸಾಮಾಜಿಕ ಧೋರಣೆಗಳು ದಲಿತರನ್ನು ಇನ್ನಷ್ಟು ಸಂಘಟಿತರಾಗುವಂತೆ ಪ್ರೇರೇಪಿಸಿದವು. ಅದರ ಪರಿಣಾಮವಾಗಿ 1923–24ರಲ್ಲಿ ಮೈಸೂರಿನಲ್ಲಿ ನಡೆದ ಅಸ್ಪೃಶ್ಯರ ಸಮ್ಮೇಳನದಲ್ಲಿ ದಲಿತ ಮುಖಂಡರು ತಮಗೆ 'ಆದಿ ಕರ್ನಾಟಕ' ಎಂಬ ಗೌರವಯುತ ಹೆಸರನ್ನು ಬಳಸಬೇಕೆಂದು ಮೈಸೂರು ಮಹಾರಾಜರನ್ನು ಒಕ್ಕೊರಲಿನಿಂದ ಮನವಿ ಮಾಡಿದರು. ಈ ಘಟನೆಯು ದಲಿತರ ಸಂಘಟಿತ ಹೋರಾಟದ ಇತಿಹಾಸದಲ್ಲಿ ಮಹತ್ವದ ತಿರುವಾಗಿ ಪರಿಣಮಿಸಿತು. 1900ರಿಂದ 1947ರವರೆಗಿನ ಅವಧಿಯಲ್ಲಿ ದಲಿತರ ಹೋರಾಟವು ಕ್ರಮೇಣ ಸಂಘಟಿತ ಚಳವಳಿಯ ಸ್ವರೂಪವನ್ನು ಪಡೆದುಕೊಂಡಿತು.

ದಲಿತ ಸಮುದಾಯದ ಉದ್ಧಾರವು ಕೇವಲ ದಲಿತರ ಪ್ರಯತ್ನಗಳಿಂದಷ್ಟೇ ಸಾಧ್ಯವಾಗಿಲ್ಲ; ದಲಿತೇತರ ಸಮಾಜ ಸುಧಾರಕರ ಪಾತ್ರವೂ ಇದರಲ್ಲಿ ಮಹತ್ವದ್ದಾಗಿದೆ. ಮೈಸೂರು ಸಂಸ್ಥಾನದಲ್ಲಿ ಆರ್. ಗೋಪಾಲಸ್ವಾಮಿ ಅಯ್ಯರ್ ಹಾಗೂ ಎ. ಗೋವಿಂದಾಚಾರ್ಯ ಸ್ವಾಮಿ ಅವರು ದಲಿತರಿಗಾಗಿ ಶಾಲೆಗಳು, ವಿದ್ಯಾರ್ಥಿನಿಲಯಗಳು ಮತ್ತು ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದರು. 1919ರಲ್ಲಿ ಆರ್. ಗೋಪಾಲಸ್ವಾಮಿ ಅಯ್ಯರ್ ಅವರು 'ಸಿವಿಕ್ ಅಂಡ್ ಸೋಶಿಯಲ್ ಪ್ರೋಗ್ರೆಸ್ ಅಸೋಸಿಯೇಷನ್' ಆಶ್ರಯದಲ್ಲಿ ಆಯೋಜಿಸಿದ 'ಪಂಚಮರ ಮಹಾಸಭೆ' ದಲಿತ ಸಂಘಟನಾ ಇತಿಹಾಸದಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ಅವಧಿಯಲ್ಲಿ ಮಹಾತ್ಮ ಗಾಂಧಿಯವರ ಹರಿಜನೋದ್ಧಾರ ಕಾರ್ಯಕ್ರಮಗಳ ಪ್ರಭಾವವೂ ಮೈಸೂರು ಸಂಸ್ಥಾನದಲ್ಲಿ ವ್ಯಾಪಕವಾಗಿ ಕಂಡುಬಂತು. ಅಸ್ಪೃಶ್ಯರು, ಅಂತ್ಯಜರು, ಪಂಚಮರು, ಹೊಲೆಯರು, ಚಂಡಾಲರು, ಮಾದಿಗರು ಮುಂತಾದ ಅವಹೇಳನಕಾರಿ ಹೆಸರುಗಳ ಬದಲಿಗೆ ಗಾಂಧೀಜಿ 'ಹರಿಜನ' ಎಂಬ ಪದವನ್ನು ಬಳಕೆಗೆ ತಂದರು. ಆದರೆ "ನಾವು ಹರಿಯ ಮಕ್ಕಳಾದರೆ, ಉಳಿದವರು ಯಾರ ಮಕ್ಕಳು?" ಎಂಬ ಪ್ರಶ್ನೆ ದಲಿತ ಸಮುದಾಯದಲ್ಲಿ ವ್ಯಾಪಕ ಚರ್ಚೆಗೆ ಕಾರಣ ವಾಯಿತು. ದಲಿತರನ್ನು ಹಿಂದೂ ಸಮಾಜದೊಳಗೆ

ಹೆಚ್ಚು ಒಳಗೊಳ್ಳಿಸುವ ಉದ್ದೇಶದಿಂದ ಶುಚಿತ್ವ, ಮಾಂಸಾಹಾರ ಮತ್ತು ಮದ್ಯಪಾನದ ನಿಯಂತ್ರಣದಂತಹ ಸುಧಾರಣಾ ಕಾರ್ಯಕ್ರಮಗಳಿಗೆ ಒತ್ತು ನೀಡಲಾಯಿತು.[4] ಇದೇ ಕಾಲಘಟ್ಟದಲ್ಲಿ ಮುರುಗೇಶ ಪಿಳ್ಳೈ ಅವರು ದಲಿತರ ಮೇಲಿನ ಸಾಮಾಜಿಕ ಬಹಿಷ್ಕಾರವನ್ನು ಖಂಡಿಸಿ, ಅವರಿಗೆ ಸ್ವಾಭಿಮಾನದಿಂದ ಬದುಕಲು ಸರ್ಕಾರ ಉಚಿತವಾಗಿ ಭೂಮಿಯನ್ನು ನೀಡಬೇಕೆಂದು ಒತ್ತಾಯಿಸಿದರು. ಈ ಪ್ರಯತ್ನಗಳು ದಲಿತ ಸಂಘಟನೆಗಳ ಬೆಳವಣಿಗೆಗೆ ಪೂರಕವಾದವು.

ಇಂದಿನ ಉತ್ತರ ಕರ್ನಾಟಕದ ಅನೇಕ ಪ್ರದೇಶಗಳು ಹಿಂದೆ ಮುಂಬೈ ಕರ್ನಾಟಕದ ಭಾಗವಾಗಿದ್ದವು. ಈ ಪ್ರದೇಶದಲ್ಲಿಯೇ ಕರ್ನಾಟಕದ ಮೊದಲ ಸಂಘಟಿತ ದಲಿತ ಹೋರಾಟಗಳು ರೂಪುಗೊಂಡವು. ಮಹಾರಾಷ್ಟ್ರದ ಸಾಮೀಪ್ಯದಿಂದ ಜ್ಯೋತಿರಾವ್ ಫೂಲೆ ಮತ್ತು ಡಾ. ಅಂಬೇಡ್ಕರ್ ಅವರ ವಿಚಾರಧಾರೆಗಳು ಬೆಳಗಾವಿ, ಧಾರವಾಡ ಹಾಗೂ ವಿಜಯಪುರ ಪ್ರದೇಶಗಳಲ್ಲಿ ವ್ಯಾಪಕ ಪ್ರಭಾವ ಬೀರಿದವು. ದೇವರಾಯ ಇಂಗಳೆ, ಬಲವಂತರಾವ್ ವರಾಳೆ ಮೊದಲಾದ ನಾಯಕರು ಡಾ. ಅಂಬೇಡ್ಕರ್ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರಿಂದ ಈ ಭಾಗದಲ್ಲಿ ದಲಿತ ಸಂಘಟನೆಗಳು ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಯಿತು. 'ಬಹಿಷ್ಕೃತ ಹಿತಕಾರಿಣಿ ಸಭೆ' ಹಾಗೂ 'ಸತ್ಯಶೋಧಕ ಸಮಾಜ' ಮುಂತಾದ ಸಂಘಟನೆಗಳು ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಗಮನಾರ್ಹ ಪಾತ್ರವಹಿಸಿದವು. ಡಾ. ಅಂಬೇಡ್ಕರ್ ಅವರು ಹಲವು ಬಾರಿ ಧಾರವಾಡ ಮತ್ತು ಬೆಳಗಾವಿ ಪ್ರದೇಶಗಳಿಗೆ ಭೇಟಿ ನೀಡಿದ್ದರಿಂದ ಅಲ್ಲಿನ ದಲಿತ ಸಮುದಾಯದಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಮತ್ತಷ್ಟು ವೃದ್ಧಿಯಾಯಿತು. ಅಸ್ಪೃಶ್ಯರಿಗಾಗಿ ಶಾಲೆಗಳ ಸ್ಥಾಪನೆ, ಶಿಕ್ಷಣದ ವಿಸ್ತರಣೆ ಹಾಗೂ ಮೌಢ್ಯ ಮತ್ತು ಅಸಮಾನತೆಯ ವಿರುದ್ಧ ಸಂಘಟಿತ ಹೋರಾಟಗಳು ಈ ಪ್ರದೇಶದಲ್ಲಿ ದಲಿತ ಚಳವಳಿಗೆ ಬಲವಾದ ಅಡಿಪಾಯವನ್ನು ನಿರ್ಮಿಸಿದವು.

ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ, ಮೈಸೂರು ಹಾಗೂ ಮುಂಬೈ–ಕರ್ನಾಟಕ ಭಾಗಗಳಷ್ಟು ವ್ಯಾಪಕವಾಗಿ ದಲಿತ ಸಂಘಟನೆಗಳು ಬೆಳವಣಿಗೆಯಾಗಲಿಲ್ಲ. ಇದಕ್ಕೆ ಅಲ್ಲಿನ ಊಳಿಗಮಾನ್ಯ (ಜಾಗೀರು) ವ್ಯವಸ್ಥೆಯ ಪ್ರಭಾವ ಪ್ರಮುಖ ಕಾರಣವೆಂದು ಪರಿಗಣಿಸಲಾಗಿದೆ. ಈ ವ್ಯವಸ್ಥೆಯ ಪರಿಣಾಮವಾಗಿ ಶಿಕ್ಷಣ, ಸಾಮಾಜಿಕ ಜಾಗೃತಿ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಈ ಪ್ರದೇಶವು ದೀರ್ಘಕಾಲ ಹಿಂದುಳಿದಿತ್ತು. ಆದಾಗ್ಯೂ, 1968ರ ಏಪ್ರಿಲ್ 29ರಂದು ಗುಲ್ಬರ್ಗಾ (ಇಂದಿನ ಕಲಬುರಗಿ)ಯಲ್ಲಿ ಭೀಮಸೇನೆ ಸಂಘಟನೆಯು ಸ್ಥಾಪನೆಯಾಗಿದ್ದು, ಈ ಭಾಗದ ದಲಿತ ಚಳವಳಿಯ ಇತಿಹಾಸದಲ್ಲಿ ಮಹತ್ವದ ತಿರುವಾಗಿದೆ. ಇದರ ಸಂಸ್ಥಾಪಕರಾದ ಬಿ. ಶ್ಯಾಮಸುಂದರ ಅವರು ಮಹಾರಾಷ್ಟ್ರದಲ್ಲಿ ಜನಿಸಿದರೂ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದಲ್ಲಿ ದಲಿತರ ಸ್ವಾಭಿಮಾನ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸಿದರು. ಈ ಸಂಘಟನೆಯು ದಲಿತರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳಿಗೆ ಸಂಘಟಿತ ಪ್ರತಿರೋಧವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. "ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಬೇಕು" ಎಂಬ ತೀವ್ರ ಪ್ರತಿರೋಧದ ಧೋರಣೆಯ ಮೂಲಕ ಭೂಮಾಲೀಕರು ಹಾಗೂ ಸವರ್ಣ ಪ್ರಭುತ್ವದಲ್ಲಿ ಭಯದ ವಾತಾವರಣವನ್ನು ನಿರ್ಮಿಸಲು ಪ್ರಯತ್ನಿಸಿತು.[5] ಗ್ರಾಮ ಮಟ್ಟದಲ್ಲಿ ಸಂಘಟನೆಗಳನ್ನು ಕಟ್ಟುವ ಮೂಲಕ ಸಾವಿರಾರು ಕಾರ್ಯಕರ್ತರನ್ನು ಒಗ್ಗೂಡಿಸಿ, ದಲಿತರಲ್ಲಿ ಸ್ವಾಭಿಮಾನ ಮತ್ತು ಹೋರಾಟದ ಮನೋಭಾವವನ್ನು ಬೆಳೆಸುವಲ್ಲಿ ಭೀಮಸೇನೆ ಯಶಸ್ವಿಯಾಯಿತು.

ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ದಲಿತ ಸಂಘಟನೆಗಳು ಅತ್ಯಂತ ಪರಿಣಾಮಕಾರಿಯಾಗಿ ರೂಪುಗೊಂಡ ಅವಧಿ ಎಪ್ಪತ್ತರ ದಶಕವಾಗಿದೆ. ಈ

ಕಾಲಘಟ್ಟವು ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ಭಾರತದ ಸಾಮಾಜಿಕ ಮತ್ತು ರಾಜಕೀಯ ಇತಿಹಾಸದಲ್ಲಿಯೂ ಮಹತ್ವದ ತಿರುವಾಗಿದೆ. ಮಹಾರಾಷ್ಟ್ರದಲ್ಲಿ 1972ರ ಜುಲೈ ತಿಂಗಳಲ್ಲಿ ದಲಿತ ಪ್ಯಾಂಥರ್ಸ್ ಸಂಘಟನೆಯು ಉದಯಗೊಂಡರೆ, ಆಂಧ್ರಪ್ರದೇಶದಲ್ಲಿ ದಿಗಂಬರ ಕಾವ್ಯ ಚಳವಳಿಯು ಕ್ರಾಂತಿಕಾರಿ ಚಿಂತನೆಗಳನ್ನು ಹರಡಿತ್ತು. ಇದೇ ಅವಧಿಯಲ್ಲಿ ದೇಶದಲ್ಲಿ ಸಾಮಾಜಿಕ ನ್ಯಾಯ ಮತ್ತು ಭೂಸುಧಾರಣೆಗೆ ಸಂಬಂಧಿಸಿದ ಪ್ರಮುಖ ರಾಜಕೀಯ ಬೆಳವಣಿಗೆಗಳು ನಡೆದವು. 1973ರಲ್ಲಿ ಜಾರಿಯಾದ ಲ್ಯಾಂಡ್ ಸೀಲಿಂಗ್ ಕಾಯ್ದೆ ಭೂಹೀನರಿಗೆ ಭೂಮಿ ದೊರಕಿಸಲು ದಾರಿ ಮಾಡಿಕೊಟ್ಟಿತು. ಕರ್ನಾಟಕದಲ್ಲಿ ಈ ಕಾಯ್ದೆಯನ್ನು ಸಮರ್ಥವಾಗಿ ಜಾರಿಗೊಳಿಸಿದವರು ಮುಖ್ಯಮಂತ್ರಿ ಡಿ. ದೇವರಾಜ ಅರಸು. ಅವರು ಅಸ್ಪೃಶ್ಯತೆ ನಿರ್ಮೂಲನೆ, ಮಲ ಹೊರುವ ಪದ್ಧತಿಯ ನಿಷೇಧ ಹಾಗೂ ಶೋಷಿತ ವರ್ಗಗಳ ಕಲ್ಯಾಣಕ್ಕಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಜಾರಿಗೆ ತಂದರು. "ಉಳುವವನೇ ಭೂಮಿಯ ಒಡೆಯ" ಎಂಬ ತತ್ವದ ಆಧಾರದ ಮೇಲೆ ಜಾರಿಗೊಂಡ ಭೂಸುಧಾರಣಾ ಕಾರ್ಯಕ್ರಮವು ಭೂಹೀನ ರೈತರು ಮತ್ತು ದಲಿತರಿಗೆ ಭೂಮಿಯ ಹಕ್ಕು ದೊರಕಿಸಲು ನೆರವಾಯಿತು.

ದೇವರಾಜ ಅರಸರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿದ್ದ ಬಿ. ಬಸವಲಿಂಗಪ್ಪ ಅವರು ದಲಿತರ ಏಳಿಗೆಗಾಗಿ ಮಹತ್ವದ ಕಾರ್ಯಗಳನ್ನು ಕೈಗೊಂಡರು. 1973ರ ನವೆಂಬರ್ 19ರಂದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್ ಆಯೋಜಿಸಿದ್ದ 'ಹೊಸ ಅಲೆ' ವಿಚಾರ ಸಂಕಿರಣದಲ್ಲಿ ಅವರು ಕನ್ನಡ ಸಾಹಿತ್ಯದ ಬಗ್ಗೆ "ಕನ್ನಡ ಸಾಹಿತ್ಯವೆಲ್ಲ ಬೂಸಾ ಸಾಹಿತ್ಯ" ಎಂಬ ಹೇಳಿಕೆ ನೀಡಿದರು. ಈ ಹೇಳಿಕೆ ರಾಜ್ಯದ ಸಾಹಿತ್ಯ ಮತ್ತು ರಾಜಕೀಯ ವಲಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಯಿತು. ಸಂಪ್ರದಾಯವಾದಿಗಳ ತೀವ್ರ ವಿರೋಧದ ಪರಿಣಾಮವಾಗಿ ಬಸವಲಿಂಗಪ್ಪ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಈ ಘಟನೆ ಕೇವಲ ಸಾಹಿತ್ಯಿಕ ವಿವಾದವಾಗಿರದೆ, ದಲಿತ ಅಸ್ಮಿತೆ, ಸಾಂಸ್ಕೃತಿಕ ರಾಜಕೀಯ ಮತ್ತು ಸಾಮಾಜಿಕ ಸಮಾನತೆಯ ಕುರಿತ ಚರ್ಚೆಗಳಿಗೆ ಹೊಸ ದಿಕ್ಕು ನೀಡಿತು. ಇದೇ ಘಟನೆಯು ದಲಿತ ವಿದ್ಯಾರ್ಥಿಗಳು, ಲೇಖಕರು ಹಾಗೂ ಬುದ್ಧಿಜೀವಿಗಳಲ್ಲಿ ಹೊಸ ದಲಿತ ಪ್ರಜ್ಞೆಯ ಉದಯಕ್ಕೆ ಕಾರಣವಾಯಿತು.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದಲಿತ ಸಂಘಟನೆಗಳು ರಾಜಕೀಯ, ಸಾಮಾಜಿಕ ಹಾಗೂ ಸೈದ್ಧಾಂತಿಕ ನೆಲೆಯನ್ನು ಮತ್ತಷ್ಟು ಬಲಪಡಿಸಿಕೊಂಡವು. 1972ರಲ್ಲಿ ಕರ್ನಾಟಕ ದಲಿತ ಕ್ರಿಯಾ ಸಮಿತಿ ಅಸ್ತಿತ್ವಕ್ಕೆ ಬಂದಿದ್ದು, ಅದರ ಮುಂದುವರಿದ ರೂಪವಾಗಿ 1974ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಸಂಸ) ಸ್ಥಾಪನೆಯಾಯಿತು. ಇದರೊಂದಿಗೆ ದಲಿತ ಲೇಖಕ–ಕಲಾವಿದರ ಬಳಗ, ದಲಿತ ಮಹಿಳಾ ಒಕ್ಕೂಟ, ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ನೌಕರರ ಒಕ್ಕೂಟ ಹಾಗೂ ದಲಿತ ಕಲಾ ಮಂಡಳಿ ಮೊದಲಾದ ಸಂಘಟನೆಗಳು ಹುಟ್ಟಿಕೊಂಡವು. ಭದ್ರಾವತಿಯಲ್ಲಿ ತನ್ನ ಚಟುವಟಿಕೆಗಳನ್ನು ಆರಂಭಿಸಿದ ದಸಂಸ, ನಂತರ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಿಗೂ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿತು. ಪ್ರೊ. ಬಿ. ಕೃಷ್ಣಪ್ಪ, ಟಿ. ರಾಜಣ್ಣ, ದೇವಯ್ಯ ಹರವೆ, ವಿ. ಮುನಿವೆಂಕಟಪ್ಪ, ಚಂದ್ರಪ್ರಸಾದ್ ತ್ಯಾಗಿ ಮೊದಲಾದ ನಾಯಕರು ಈ ಚಳವಳಿಗೆ ಸೈದ್ಧಾಂತಿಕ ಮತ್ತು ಸಂಘಟನಾ ಬಲವನ್ನು ಒದಗಿಸಿದರು. ದಸಂಸ ಗ್ರಾಮೀಣ ಪ್ರದೇಶಗಳಿಗೂ ತಲುಪಿ ದಲಿತ ಸಮುದಾಯದಲ್ಲಿ ಸ್ವಾಭಿಮಾನ, ಸಾಮಾಜಿಕ ನ್ಯಾಯ ಹಾಗೂ ಹಕ್ಕುಗಳ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಭೂ ವಿವಾದಗಳು, ಜಾತಿ ಆಧಾರಿತ ದೌರ್ಜನ್ಯಗಳು, ಮಹಿಳೆಯರ ಮೇಲಿನ ಹಿಂಸೆ ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ ಸಂಘಟಿತ

ಹೋರಾಟಗಳನ್ನು ರೂಪಿಸುವ ಮೂಲಕ ಜನಸಾಮಾನ್ಯರಲ್ಲಿ ಸಾಮಾಜಿಕ ಜಾಗೃತಿ ಮೂಡಿಸಿತು.

ದಲಿತ ಸಂಘಟನೆಗಳು ಕೇವಲ ಸಾಮಾಜಿಕ ಮತ್ತು ರಾಜಕೀಯ ಹೋರಾಟಗಳಿಗೆ ಸೀಮಿತವಾಗಿರದೆ, ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿಯೂ ಹೊಸ ಚಳವಳಿಗೆ ನಾಂದಿ ಹಾಡಿದವು. ಕಾವ್ಯ, ಕಥೆ, ಕಾದಂಬರಿ, ನಾಟಕ, ಜನಪದ ಗೀತೆ ಹಾಗೂ ಹೋರಾಟದ ಹಾಡುಗಳ ಮೂಲಕ ದಲಿತ ಸಾಹಿತ್ಯವು ಬಲಿಷ್ಠ ಸಾಮಾಜಿಕ ಅಭಿವ್ಯಕ್ತಿಯಾಗಿ ರೂಪುಗೊಂಡಿತು. ವಿಶೇಷವಾಗಿ ದಸಂಸ ತನ್ನ ಹೋರಾಟದ ಅಂಗವಾಗಿ ಜನಪದ ಗೀತೆಗಳು, ಪ್ರತಿಭಟನೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಯುವ ಸಮುದಾಯವನ್ನು ಸಂಘಟಿಸಿತು. ದಲಿತರ ಮೇಲಿನ ದೌರ್ಜನ್ಯ, ದಲಿತ ಮಹಿಳೆಯರ ಮೇಲಿನ ಲೈಂಗಿಕ ಹಿಂಸೆ, ಮೀಸಲಾತಿ, ಬೆತ್ತಲೆಸೇವೆ, ಭೂಹಕ್ಕು, ಭೂಮಾಲೀಕರ ವಿರುದ್ಧದ ಹೋರಾಟ, ಮತಾಂತರ, ಕಾರ್ಮಿಕರ ಶೋಷಣೆ ಹಾಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ನಡೆದ ಹೋರಾಟಗಳಿಗೆ ಈ ಸಂಘಟನೆಗಳು ಚಳವಳಿಯ ಸ್ವರೂಪ ನೀಡಿದವು. ಈ ಹೋರಾಟಗಳಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಲಿತ ಪ್ಯಾಂಥರ್ಸ್, ಪ್ರಗತಿ ರಂಗ, ಕರ್ನಾಟಕ ರಾಜ್ಯ ರೈತ ಸಂಘ ಸೇರಿದಂತೆ ಅನೇಕ ಪ್ರಗತಿಪರ ಸಂಘಟನೆಗಳು ಪರಸ್ಪರ ಸಹಯೋಗದೊಂದಿಗೆ ದಲಿತ ಸಮುದಾಯದ ಹಕ್ಕುಗಳ ರಕ್ಷಣೆಗೆ ಮಹತ್ವದ ಕೊಡುಗೆ ನೀಡಿವೆ.

ಆರಂಭಿಕ ಹಂತದಲ್ಲಿ ದಲಿತ ಸಂಘರ್ಷ ಸಮಿತಿಯು ಮುಖ್ಯವಾಗಿ ಸಾಂಸ್ಕೃತಿಕ ಚಳವಳಿಯ ರೂಪದಲ್ಲಿಯೇ ಕಾರ್ಯನಿರ್ವಹಿಸಿತು. ಈ ಕುರಿತು, "ದಲಿತ ಸಂಘರ್ಷ ಸಮಿತಿ ಒಂದು ಸಾಂಸ್ಕೃತಿಕ ಚಳವಳಿಯ ರೂಪದಲ್ಲೇ ಇತ್ತು. ಆಗ ಮುಖ್ಯವಾಗಿ ನೆರೆ ರಾಜ್ಯದ ಗದ್ದರ್ ಅವರ ಹೋರಾಟದ ಹಾಡುಗಳೇ ಚಳವಳಿಯ ಗೀತೆಗಳಾಗಿದ್ದವು. ನಂತರದಲ್ಲಿ ಕನ್ನಡದಲ್ಲಿ ಹೊಸ ತಲೆಮಾರಿನ ದಲಿತ ಲೇಖಕರು ಸಾಹಿತ್ಯ ರಚನೆಗೆ ತೊಡಗಿದರು."[6] ಎಂಬ ಅಭಿಪ್ರಾಯವು ಅದರ ಆರಂಭಿಕ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ನಂತರ ಸಿದ್ಧಲಿಂಗಯ್ಯ ಅವರ 'ಹೊಲೆಮಾದಿಗರ ಹಾಡು' ಕೃತಿಯು ಕನ್ನಡ ದಲಿತ ಸಾಹಿತ್ಯದ ಪ್ರಮುಖ ಮೈಲಿಗಲ್ಲಾಗಿ ಹೊರಹೊಮ್ಮಿತು. ದಲಿತ ಸಂಘರ್ಷ ಸಮಿತಿಯು ರಾಜಕೀಯೇತರ ಸಂಘಟನೆಯಾಗಿದ್ದ ಸಂದರ್ಭದಲ್ಲಿ ಅದರೊಳಗೆ ಹೆಚ್ಚಿನ ಐಕ್ಯತೆ ಮತ್ತು ಸಂಘಟನಾ ಬಲವಿತ್ತು. ಆದರೆ ರಾಜಕೀಯ ಪಕ್ಷಗಳೊಂದಿಗೆ ನಿಕಟ ಸಂಬಂಧ ಬೆಳೆಸಿದ ನಂತರ ಸಂಘಟನೆಯೊಳಗೆ ಭಿನ್ನಾಭಿಪ್ರಾಯಗಳು ಉಂಟಾಗಿ, ವಿವಿಧ ಬಣಗಳಾಗಿ ವಿಭಜನೆಯಾಗುವ ಪ್ರಕ್ರಿಯೆ ಆರಂಭವಾಯಿತು. ಈ ಬೆಳವಣಿಗೆಯು ದಲಿತ ಚಳವಳಿಯ ಸಂಘಟನಾ ಶಕ್ತಿಯ ಮೇಲೆ ಗಮನಾರ್ಹ ಪರಿಣಾಮ ಬೀರಿತು.

ದಲಿತ ಸಂಘಟನೆಗಳ ಹೋರಾಟವನ್ನು ದುರ್ಬಲಗೊಳಿಸಲು ವಿವಿಧ ರಾಜಕೀಯ ಹಾಗೂ ಕೋಮುವಾದಿ ಶಕ್ತಿಗಳು ನಿರಂತರ ಪ್ರಯತ್ನ ನಡೆಸಿದರೂ, ಸಂಘಟನೆಗಳು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಆಶಯವನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಹೋರಾಟವನ್ನು ಮುಂದುವರಿಸಿವೆ. ಈ ಹೋರಾಟಕ್ಕೆ ಸಾಹಿತ್ಯವು ಅತ್ಯಂತ ಪರಿಣಾಮಕಾರಿ ಸಾಧನವಾಗಿ ರೂಪುಗೊಂಡಿತು. ದಲಿತ ಕಾವ್ಯ, ಕಥೆ, ಕಾದಂಬರಿ, ಆತ್ಮಕಥೆ, ಪ್ರಬಂಧ ಮತ್ತು ವಿಮರ್ಶಾ ಸಾಹಿತ್ಯಗಳು ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ದಲಿತರಲ್ಲಿ ಅಕ್ಷರಜ್ಞಾನವನ್ನು ವೃದ್ಧಿಸುವುದು, ಶಿಕ್ಷಣದ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು, ಸರ್ಕಾರಿ ಯೋಜನೆಗಳು ಮತ್ತು ಮೀಸಲಾತಿಯ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಪ್ರೇರೇಪಿಸುವುದು ದಲಿತ ಸಾಹಿತ್ಯದ ಪ್ರಮುಖ ಉದ್ದೇಶಗಳಾಗಿದ್ದವು. ವಿಶೇಷವಾಗಿ 1975ರ ನಂತರದ ಅವಧಿಯಲ್ಲಿ ದಲಿತ ಸಾಹಿತ್ಯ ಮತ್ತು ಬುದ್ಧಿಜೀವಿಗಳ ಚಟುವಟಿಕೆಗಳು

ದಲಿತ ಸಮುದಾಯದಲ್ಲಿ ಬೌದ್ಧಿಕ ಪ್ರಜ್ಞೆಯನ್ನು ವಿಸ್ತರಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಯತ್ತ ಕೊಂಡೊಯ್ಯುವಲ್ಲಿ ಗಮನಾರ್ಹ ಪಾತ್ರವಹಿಸಿವೆ.

ಇದೇ ಕಾಲಘಟ್ಟದಲ್ಲಿ ದಲಿತ ಸಂಘಟನೆಗಳೊಳಗೆ ಮತ್ತೊಂದು ಮಹತ್ವದ ಬೆಳವಣಿಗೆಯೂ ಕಂಡುಬಂತು. ರಾಜಕೀಯ ಅಧಿಕಾರವನ್ನು ಸಾಧಿಸುವ ಉದ್ದೇಶದಿಂದ ಕೆಲವು ನಾಯಕರು ರಾಜಕೀಯ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡರು. ಇದರ ಪರಿಣಾಮವಾಗಿ ಸ್ವಾಭಿಮಾನ, ಆತ್ಮಗೌರವ ಮತ್ತು ಸಾಂಸ್ಕೃತಿಕ ಹೋರಾಟಗಳಿಗಿಂತ ರಾಜಕೀಯ ಲಾಭಗಳಿಗೆ ಹೆಚ್ಚಿನ ಆದ್ಯತೆ ನೀಡುವ ಪ್ರವೃತ್ತಿ ಬೆಳೆಯಿತು. ಸಾಂಸ್ಕೃತಿಕ ರಾಜಕಾರಣ ಮತ್ತು ಅಧಿಕಾರ ರಾಜಕಾರಣದ ನಡುವಿನ ಈ ಸಂಘರ್ಷವು ದಲಿತ ಸಂಘಟನೆಗಳ ವಿಭಜನೆಗೆ ಪ್ರಮುಖ ಕಾರಣಗಳಲ್ಲಿ ಒಂದಾಯಿತು. ಇದರ ಪರಿಣಾಮವಾಗಿ ಹಲವು ಪ್ರತ್ಯೇಕ ಸಂಘಟನೆಗಳು ಮತ್ತು ಬಣಗಳು ರೂಪುಗೊಂಡವು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ವಿಭಜನೆಯ ದುಷ್ಪರಿಣಾಮಗಳನ್ನು ಅರಿತು, ದಲಿತ ಸಂಘಟನೆಗಳನ್ನು ಮತ್ತೆ ಒಂದೇ ವೇದಿಕೆಗೆ ತರುವ ಪ್ರಯತ್ನಗಳು ಆರಂಭವಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ದಲಿತ ಸಮುದಾಯಕ್ಕೆ ಮಾತ್ರವಲ್ಲದೆ, ಎಲ್ಲ ಶೋಷಿತ ಸಮುದಾಯಗಳ ಹಕ್ಕುಗಳ ರಕ್ಷಣೆಗೆ ಆಧಾರವಾಗಿರುವ ಭಾರತೀಯ ಸಂವಿಧಾನದ ಮೂಲ ಆಶಯಗಳೇ ವಿವಿಧ ರೀತಿಯ ಸವಾಲುಗಳನ್ನು ಎದುರಿಸುತ್ತಿವೆ. ಮೀಸಲಾತಿಯ ಹಕ್ಕುಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳು, ದಲಿತ ಸಮುದಾಯವನ್ನು ರಾಜಕೀಯವಾಗಿ ಬಳಸಿಕೊಂಡು ಸಾಮಾಜಿಕವಾಗಿ ಕಡೆಗಣಿಸುವ ಧೋರಣೆಗಳು ಹಾಗೂ ಸಾರ್ವಜನಿಕ ಸಂಪನ್ಮೂಲಗಳ ಖಾಸಗೀಕರಣವು ಹೊಸ ಆತಂಕಗಳಿಗೆ ಕಾರಣವಾಗಿವೆ. ಭೂಮಿ, ಶಿಕ್ಷಣ, ಉದ್ಯೋಗ ಮತ್ತು ಮೂಲಭೂತ ಸಂಪನ್ಮೂಲಗಳ ಮೇಲಿನ ನಿಯಂತ್ರಣ ಕ್ರಮೇಣ ರಾಜ್ಯ ಮತ್ತು ಖಾಸಗಿ ಬಂಡವಾಳದತ್ತ ಕೇಂದ್ರೀಕೃತವಾಗುತ್ತಿರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಸವಾಲಾಗಿ ಪರಿಣಮಿಸಿದೆ. ಇದರ ಜೊತೆಗೆ ಆಹಾರ, ಉಡುಪು, ವಾಸಸ್ಥಳ, ಜೀವನಶೈಲಿ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಗಳ ಮೇಲೂ ನಿಯಂತ್ರಣ ಸಾಧಿಸುವ ಪ್ರವೃತ್ತಿಗಳು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಧಕ್ಕೆಯನ್ನುಂಟುಮಾಡುತ್ತಿವೆ.

ಈ ಬದಲಾಗುತ್ತಿರುವ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ದಲಿತ ಸಂಘಟನೆಗಳು ತಮ್ಮ ಕಾರ್ಯತಂತ್ರಗಳನ್ನು ಪುನರ್‌ವಿಮರ್ಶಿಸಿ, ಸಂವಿಧಾನಾತ್ಮಕ ಮೌಲ್ಯಗಳು, ಮಾನವೀಯತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಹೊಸ ಸಂಘಟನಾ ಮಾದರಿಗಳನ್ನು ರೂಪಿಸಬೇಕಾದ ಅಗತ್ಯವಿದೆ. ದಲಿತ ಸಮುದಾಯವನ್ನು ಕೇವಲ ರಾಜಕೀಯ ಸಾಧನವಾಗಿ ಅಥವಾ "ಬೇಟೆಯ ವಸ್ತು"ವಾಗಿ ಬಳಸುವ ಶಕ್ತಿಗಳ ವಿರುದ್ಧ ಜಾಗೃತಿ ಮೂಡಿಸಿ, ವಾಸ್ತವ ಪ್ರಜ್ಞೆಯ ಆಧಾರದ ಮೇಲೆ ಸಂಘಟಿತ ಹೋರಾಟವನ್ನು ಬಲಪಡಿಸುವುದು ಇಂದಿನ ಅಗತ್ಯವಾಗಿದೆ. ಮುಂದಿನ ಪೀಳಿಗೆಯು ಹಿಂದಿನ ತಲೆಮಾರುಗಳು ಅನುಭವಿಸಿದ ಶೋಷಣೆ, ಅಸಮಾನತೆ ಮತ್ತು ಸಾಮಾಜಿಕ ಬಹಿಷ್ಕಾರದಿಂದ ಮುಕ್ತವಾದ ಸಮಾನತೆಯ ಸಮಾಜದಲ್ಲಿ ಬದುಕುವಂತೆ ಮಾಡುವ ಹೊಣೆಗಾರಿಕೆ ಇಂದಿನ ದಲಿತ ಸಂಘಟನೆಗಳ ಮೇಲಿದೆ. ಆದ್ದರಿಂದ ಸಮರ್ಪಿತ ನಾಯಕತ್ವ, ಸೈದ್ಧಾಂತಿಕ ಸ್ಪಷ್ಟತೆ, ಸಂಘಟನಾ ಐಕ್ಯತೆ ಮತ್ತು ಸಂವಿಧಾನಾತ್ಮಕ ಬದ್ಧತೆಯೊಂದಿಗೆ ಕಾರ್ಯನಿರ್ವಹಿಸುವ ದಲಿತ ಸಂಘಟನೆಗಳು ಸಮಕಾಲೀನ ಭಾರತದ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಅನಿವಾರ್ಯ ಶಕ್ತಿಗಳಾಗಿವೆ.

**ಕೊನೆಯ ಟಿಪ್ಪಣಿಗಳು**

1. ಚಂದ್ರಶೇಖರ, ಟಿ.ಆರ್. (ಸಂ.) (2005). *ದಲಿತ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.316

2. ಪದ್ಮರಾಜ ದಂಡಾವತಿ (ಸಂ.) (2013). *ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ.* ದಲಿತ ಸಂಘರ್ಷ ಸಮಿತಿ. ಪು.37.
3. ಅರವಿಂದ ಮಾಲಗತ್ತಿ. *ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ,* ಪುಟ.19
4. ಮುನಿವೆಂಕಟಪ್ಪಯ್ಯ, ವಿ. (ಸಂ.) (2009). ದಲಿತ ಚಳವಳಿ ಚರಿತ್ರೆ, ತನುಮನ ಪ್ರಕಾಶನ. ಪು.203
5. ಅದೇ. ಪು.207
6. ಮುನಿವೆಂಕಟಪ್ಪಯ್ಯ, ವಿ. (ಸಂ.) (1998). ದಲಿತ ಚಳವಳಿ ಒಂದು ಅವಲೋಕನ, ವಿಚಾರವಾದಿ ಪ್ರಕಾಶನ. ಪು.25